ಶ್ರೀ ವಿ. ಎಲ್. ಪಾಟೀಲ್.—ಈಗಾಗಲೇ ಹೇಳಿದ್ದೇನೆ. 50 ಹಾಸ್ಟಲುಗಳನ್ನು ಕಟ್ಟುವ ವಿಚಾರ ಪರಿಶೀಲನೆ ಮಾಡಿದ್ದೇವೆ. ಈಗಾಗಲೇ ಕೆಲವು ಕಟ್ಟಡಗಳನ್ನು ಕಟ್ಟಿದ್ದೇವೆ. ಸ್ಥಳ ಪರಿಶೀಲನೆ ಮಾಡಿ ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಕಟ್ಟುತ್ತೇವೆ.

Sri B. P. GANGADHAR.—What is the time limit ?

ಶ್ರೀ ವಿ. ಎಲ್. ಪಾಟೀಲ್.—ಸ್ಥಳ ತೊಂದರೆ ಇರುತ್ತದೆ. ಸ್ಥಳ ಸಿಕ್ಕಿದ ನಂತರ ಅದು ಆಗಬಹುದು. ಟೈಂ ಲಿಮಿಟ್ ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕೆ. ಎಂ. ತಮ್ಮಯ್ಯ.—ಸ್ವಾಮಿ, ತಾಲ್ಲೂಕು ಹೆಡ್ ಕ್ವಾರ್ಟರ್ಸ್ ಆದ ಕಡೂರ್‌ನಲ್ಲಿ ಬಾಡಿಗೆ ಮನೆಯಲ್ಲಿ ನಡೆಸುತ್ತಾ ಇವ್ವಾರೆ ಅಲ್ಲಿ ಕಟ್ಟಿನವೇ ಬೀರೂರಿನಲ್ಲಿ ಕಟ್ಟುತ್ತೇವೆ ಎಂದರೆ ಏನು ?

ಶ್ರೀ ವಿ. ಎಲ್. ಪಾಟೀಲ್.—ಬೀರೂರಿನಲ್ಲಿ ಕಟ್ಟುತ್ತೇವೆ ಎಂದು ಹೇಳಲಿಲ್ಲ.

ಶ್ರೀ ಎಸ್. ಎಸ್. ಅರಕೇರಿ.—ಮೈಸೂರು ಸರ್ಕಾರದವರು ತಾಲ್ಲೂಕಿಗೆ ಒಂದಾದರೂ ಹಿಂದುಳಿದವರ ಹಾಸ್ಟಲ್‌ನ್ನು ಕಟ್ಟಬೇಕು ಎಂದು ನಿರ್ಧಾರ ಮಾಡಿದ್ದೀರಾ ?

ಶ್ರೀ ವಿ. ಎಲ್. ಪಾಟೀಲ್.—ತಾಲ್ಲೂಕ್ ಬೋರ್ಡ್ ಡಿಸ್ಟ್ರಿಕ್ಟ್ ಬೋರ್ಡ್ ಕಟ್ಟಬೇಕು ಎನ್ನುವ ವಿಚಾರ ಮಾಡಿದೆ. ಅದರಂತೆ ವಿಚಾರ ಮಾಡುತ್ತಾ ಇದ್ದೇವೆ.

ಶ್ರೀ ಎಸ್. ಎಸ್. ಅರಕೇರಿ.—ಒಂದೊಂದು ತಾಲ್ಲೂಕಿನಲ್ಲಿ 120 ಹಳ್ಳಿಗಳು ಇವೆ. ಡಿಸ್ಟ್ರಿಕ್ಟ್‌ಗೆ ಒಂದೊಂದು ಇದ್ದರೆ ಹೇಗೆ ?

ಶ್ರೀ ವಿ. ಎಲ್. ಪಾಟೀಲ್.—ಎರ್ನಾ ಕಡೆಗೂ ಕೊಡಬೇಕು ಎನ್ನುವ ವಿಚಾರ ಇದೆ.

ಶ್ರೀ ಕೊಂಡಜ್ಜಿ ಬಸಪ್ಪ.—ಮೈಸೂರು ಸಂಸ್ಥಾನದಲ್ಲಿ ನಿಮ್ನವರ್ಗದವರ ವಿದ್ಯಾರ್ಥಿನಿಲಯವನ್ನು ನಿರ್ಮಿಸುವುದಕ್ಕೆ ಬಜೆಟ್‌ನಲ್ಲಿ ಎಷ್ಟು ಹಣ ಒದಗಿಸಿದ್ದೀರಾ ಎಂಬುದನ್ನು ಹೇಳುತ್ತೀರಾ ?

ಶ್ರೀ ವಿ. ಎಲ್. ಪಾಟೀಲ್.—ಬೇರೆ ಪ್ರಶ್ನೆ ಹಾಕಿದರೆ ಹೇಳಬಹುದು.

Sale of Lottery Tickets

13. Sri S. M. GUREDDI (Muddebihal).—

Will the Minister for Finance, Planning and Youth Affairs be pleased to state :—

(*a*) whether they have thought of collecting money for developmental works through sale of lottery tickets ;

(*b*) if so, at what stage it is ?

A.—Sri RAMAKRISHNA HEGDE (Minister for Finance, Planning and Youth Affairs).—

(*a*) Yes.

(*b*) Scheme is being prepared by getting the connected information.

ಶ್ರೀ ಎಸ್. ಎಂ. ಗುರೆಡ್ಡಿ.—ರಾಟರಿ ಟಿಕೇಟುಗಳನ್ನು ಮಾರುವ ಮೂಲಕ ರಾಜ್ಯ ಸರ್ಕಾರಕ್ಕೆ ಎಷ್ಟು ಹಣ ದೊರಕಬಹುದು ಎಂದು ಹೇಳುವುದಕ್ಕೆ ಆಗುತ್ತದೆಯೇ ?

† ಶ್ರೀ ರಾಮಕೃಷ್ಣ ಹೆಗಡೆ.—ಈಗಲೇ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ಎಂ. ಗುರೆಡ್ಡಿ.—ಈಗಾಗಲೇ ಬೇರೆ ರಾಜ್ಯದವರು ತಮ್ಮ ರಾಜ್ಯದಲ್ಲಿ ರಾಟರಿ ಟಿಕೇಟ್ ಮಾರುವುದರಿಂದ ಎಷ್ಟು ಹಣ ಸರ್ಕಾರಕ್ಕೆ ಬರುತ್ತದೆ ಎಂಬುದನ್ನು ತಿಳಿಸಿದ್ದಾರೆ. ಪಂಜಾಬ್ ಸರ್ಕಾರದವರು ಈ ಮೂಲಕ ತಮ್ಮ ಸರ್ಕಾರಕ್ಕೆ ಎಷ್ಟು ಹಣ ಬರುತ್ತದೆಂಬುದನ್ನು ಇವತ್ತಿನ ಪೇಪರ್‌ನಲ್ಲಿ ತಿಳಿಸಿದ್ದಾರೆ. ಅದೇ ರೀತಿ ನಮ್ಮ ಸರ್ಕಾರದವರು ಸಹ ಈ ರಾಟರಿ

ಟಿಕೇಟ್‌ಗಳನ್ನು ಮಾರುವ ಮೂಲಕ ಎಷ್ಟು ಹಣ ಒದಗಿಸಿಕೊಳ್ಳಬಹುದು ಎಂಬುದನ್ನು ಹೇಳುವುದಕ್ಕೆ ಸಾಧ್ಯವಾಗುತ್ತದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಎಷ್ಟು ಹಣ ಬರುತ್ತದೆ ಎಂದು ಅಂದಾಜು ಮೂಲಕ ನಮಗೆ ಗೊತ್ತಿದೆ. ಆದರೆ ಈಗ ಹೇಳುವುದು ಸೂಕ್ತವಲ್ಲ.

Sri M. RAMAPPA.—Is it considered necessary that this House shoud pass any enactment for implementing this scheme ?

Sri RAMAKRISHNA HEGDE.—Yes, Sir.

ಶ್ರೀ ವಾಟಾಳ್ ನಾಗರಾಜ್.—ಒಂದು ಕಡೆ ಸರ್ಕಾರದವರು ಗ್ಯಾಂಬಲಿಂಗ್ ನಿಲ್ಲಿಸಬೇಕೆಂದು ಹೇಳುತ್ತಿದ್ದಾರೆ, ಮತ್ತೊಂದು ಕಡೆ ಸರ್ಕಾರದವರೇ ರಾಟರಿ ಟಿಕೇಟ್‌ಗಳನ್ನು ಮಾರುವುದು ಅನ್ಯಾಯವಲ್ಲವೆ ?

ಶ್ರೀ ರಾಮಕೃಷ್ಣ ಹೆಗಡೆ.—ರಾಟರಿ ಟಿಕೆಟ್ ಮಾರುವುದು ಗ್ಯಾಂಬಲಿಂಗ್ ಆಗುವುದಿಲ್ಲ. ಇವರಲ್ಲಿ ಒಂದು ರೂಪಾಯಿ ಟಿಕೆಟ್ ತೆಗೆದುಕೊಂಡರೆ ಒಂದು ಲಕ್ಷ ರೂಪಾಯಿಗಳನ್ನು ಗಳಿಸಬಹುದು.

ಶ್ರೀ ಪಿ. ವೆಂಕಟಗಿರಿಯಪ್ಪ.—ರಾಟರಿ ಟಿಕೇಟ್‌ಗಳನ್ನು ಮಾರುವ ಬಗ್ಗೆ ಸರ್ಕಾರದವರು ವಿಶೇಷ ಅಧಿಕಾರಿಗಳನ್ನು ನೇಮಿಸುವುದಕ್ಕೆ ಏರ್ಪಾಡು ಮಾಡಿದ್ದಾರೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಇದುವರೆಗೆ ಯಾರನ್ನೂ ನೇಮಕ ಮಾಡಿಲ್ಲ ಸ್ಕೀಮನ್ನು ಸಿದ್ಧಮಾಡುತ್ತಿದ್ದೇವೆ. ಅದು ಆದಮೇಲೆ ಈ ಮಾನ್ಯ ಸಭೆಯ ಒಪ್ಪಿಗೆ ಸಿಕ್ಕಿದಮೇಲೆ ಸಿಬ್ಬಂದಿಗಳನ್ನು ನೇಮಕ ಮಾಡುವ ಪ್ರಶ್ನೆ ಬರುತ್ತದೆ.

ಶ್ರೀ ಎಸ್. ಶಿವಪ್ಪ.—ಸರ್ಕಾರದವರು ಜೂಜುಗಾರಿಕೆ ನೀತಿಯನ್ನು, ಮದ್ಯ ಮಾರಾಟ ನೀತಿಯನ್ನು ಮತ್ತು ನಿಮ್ಮ ಉಪಮಂತ್ರಿಗಳು ಹೇಳಿರುವಂತೆ ವ್ಯಭಿಚಾರ ಕಾರ್ಯೋನಿಗಳನ್ನು ಸ್ಥಾಪಿಸುವ ನೀತಿಯನ್ನು ಯಾವಾಗಲಿಂದ ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡಿದ್ದಾರೆ ?

ಶ್ರೀ ರಾಮಕೃಷ್ಣ ಹೆಗಡೆ.—ಜೂಜುಗಾರಿಕೆಗೆ ಮತ್ತು ವ್ಯಭಿಚಾರಕ್ಕೆ ಸರ್ಕಾರ ಪ್ರೋತ್ಸಾಹ ಕೊಟ್ಟಿಲ್ಲ. ರಾಟರೀ ಟಿಕೆಟ್‌ಗಳನ್ನು ಮಾರುವುದು ಜೂಜುಗಾರಿಕೆ ಎಂದು ಹೇಳುವುದು ಸರಿಯಲ್ಲ.

ಶ್ರೀ ಬಿ. ಪಿ. ಗಂಗಾಧರ್.—ಸ್ವಾಮಿ, ಈ ಮೈಸೂರು ದೇಶ ಪ್ರಪಂಚದಲ್ಲೆಲ್ಲಾ ಒಂದು ಮಾದರಿಯಾದ ದೇಶವೆಂದು ಹೆಸರುವಾಸಿಯಾಗಿದೆ. ಇಂಥ ಮಾದರಿ ದೇಶದಲ್ಲಿ ನಿಮ್ಮ ಸರ್ಕಾರ ಮೊಟ್ಟಮೊದಲನೆಯದಾಗಿ ಮಾಡತಕ್ಕದ್ದು, ಈ ರಾಟರಿ ತರತಕ್ಕಂಥದ್ದು. ಇದರಿಂದ ಈ ಮೈಸೂರು ದೇಶಕ್ಕೆ ಒಂದು ಧಕ್ಕೆ ಬರುತ್ತದೆ, ಆದ್ದರಿಂದ ಇದನ್ನು ಕೈಬಿಡಬೇಕೆಂದು ಸೂಚನೆ ಮಾಡುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರು ಹೇಳಿದಂತೆ, ಮೊದಲನೆಯದಾಗಿ, ಮೈಸೂರು ಒಂದು ದೇಶವಲ್ಲ, ಇದು ಒಂದು ರಾಜ್ಯ. ಈಗ ಮೈಸೂರು ರಾಜ್ಯ ರಾಟರಿ ತಯಾರು ನಡೆಯುವುದರಲ್ಲಿ ಮೊದಲನೆಯ ರಾಜ್ಯವಲ್ಲ. ಪ್ರಪಂಚದ ಅನೇಕ ದೇಶಗಳಲ್ಲಿ ಇದನ್ನು ನಡೆಸುತ್ತಿದ್ದಾರೆ; ಮತ್ತು ಒಳ್ಳೆಯ ಕಾರಣಕ್ಕಾಗಿ ನಡೆಸುತ್ತಿದ್ದಾರೆ. ನಮ್ಮ ದೇಶದಲ್ಲಿ ಈಗಾಗಲೇ ಕೇರಳ ಸರ್ಕಾರ, ಪಂಜಾಬ್ ಸರ್ಕಾರ ಮತ್ತು ಇನ್ನಿತರ ಒಂದೆರಡು ಸರ್ಕಾರಗಳು ಇದನ್ನು ಒಪ್ಪಿಕೊಂಡಿವೆ. ಇದು ಜೂಜುಗಾರಿಕೆಯಾಗುತ್ತದೆ ಎಂದು ಮಾನ್ಯ ಸದಸ್ಯರು ಭಾವನೆ ಮಾಡಿಕೊಂಡಿದ್ದಾರೆ, ಅದು ಸರಿಯಲ್ಲ. ರಾಟರಿಯಲ್ಲಿ ಪ್ರತಿಯೊಬ್ಬನಿಗೂ ಒಂದು ರೂಪಾಯಿ ಕೊಟ್ಟು, ಅದನ್ನು ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗಿಸಿಕೊಳ್ಳಬಹುದು, ಇದರಿಂದ ಅಪ್ರತ್ಯಕ್ಷವಾದ ಒಂದು ಸಹಾಯ ಮಾಡಿದಂತೆ ಆಗುತ್ತದೆ.

Selection of Text Books

14. Sri S. R. BOMMAI (Kundgol).—

Will the Minister for Education be pleased to state :—

(*a*) whether Government have prescribed selected text books for Primary, Middle and High Schools;